ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂಕಂ:ಹ.ಬ.ವಿವಾದ:65/2015-16 ದಿ: 07-10-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**
ಪದ್ಮಮ್ಮ ಉರುಫ್ ಪದ್ಮಾವತಿ
ಗಂಡ: ಸುಧಾಕರ ರೆಡ್ಡಿ
ಊಳೂರು ಗ್ರಾಮ, ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**
ಹುಚ್ಚಪ್ಪ ತಂದೆ: ಲೇಟ್ ಹರಿಜನ
ಅದ್ದಿಗೇರಿ ಈರಪ್ಪ ಊಳುರು ಗ್ರಾಮ
ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಊಳೂರು ಗ್ರಾಮ | 206/C | 0-46 | H- 12/2014-15 | 27/2014-15 |

ಪೀಠಿಕೆ:-

ಸಿರುಗುಪ್ಪ ತಾಲೂಕಿನ ಊಳೂರುಗ್ರಾಮದ ಸ.ನಂ.206C ವಿಸ್ತೀರ್ಣ 0-46 ಸೆಂಟ್ಸ್ ಜಮೀನಿಗೆ ಸಂಭಂದಿಸಿದಂತೆ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿಪತ್ರ ನಂ: **SRG-1-03516/2014-15 Dt.06-09-2014** ರ ಖರೀದಿ ಪತ್ರ ಪ್ರಕಾರ **ಪದ್ಮಮ್ಮ ಉರುಫ್ ಪದ್ಮಾವತಿ ಗಂಡ: ಸುಧಾಕರ ರೆಡ್ಡಿ** ಇವರ ಹೆಸರಿನಲ್ಲಿ ಖಾತೆಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ. ನಿಗದಿತ ಅವಧಿಯೊಳಗೆ **ಹುಚ್ಚಪ್ಪ ತಂದೆ: ಲೇಟ್ ಹರಿಜನ ಅದ್ದಿಗೇರಿ ಈರಪ್ಪ** ಇವರು ದಿ: 13-10-2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು ದಿ: 18-03-2016, 02-04-2016, 22-04-2016, 24-06-2016, 22-07-2016, 19-08-2016 ಮತ್ತು 16-09-2016ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

-2-

ವಾದಿಗಳಾದ ಪದ್ಮಮ್ಮ ಉರುಫ್ ಪದ್ಮಾವತಿ ಗಂಡ: ಸುಧಾಕರರೆಡ್ಡಿ ಊಳೂರು ಗ್ರಾಮ, ಸಿರುಗುಪ್ಪ ತಾಲೂಕ ಇವರು ಊಳೂರುಗ್ರಾಮದ ಸ.ನಂ.206C ವಿಸ್ತೀರ್ಣ 0–46 ಸೆಂಟ್ಸ್ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿಪತ್ರ ನಂ: **SRG-1-03516/2014-15 Dt.06-09-2014** ರಖರೀದಿ ಪತ್ರ ಪ್ರಕಾರ ಗುಡ್ಡ ಹುಚ್ಚಪ್ಪ ತಂದೆ: ಲೇಟ್ ಈರಪ್ಪ ಇವರಿಂದ ಖರೀದಿ ಹೊಂದಿದ್ದು ಹಕ್ಕು ಬದಲಾವಣೆ ಸಂದರ್ಭದಲ್ಲಿ ವಿಚಾರಣಾ ಹುಚ್ಚಪ್ಪ ತಂದೆ: ಲೇಟ್ ಹರಿಜನ ಅದ್ದಿಗೇರಿ ಈರಪ್ಪ ಊಳೂರು ಗ್ರಾಮ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಆದರೆ ವಿಚಾರಣೆ ಸಂದರ್ಭದಲ್ಲಿ ಯವುದೇ ಪೂರಕ ದಾಖಲೆಗಳನ್ನಾಗಲೀ ಲಿಖಿತ ಹೇಳಿಕೆಗಳನ್ನಾಗಲೀ ನೀಡಿರುವುದಿಲ್ಲ. ಪ್ರಯುಕ್ತ ಅವರ ತಕರಾರು ಅರ್ಜಿಯನ್ನು ತಳ್ಳಿಹಾಕಿ ಊಳೂರುಗ್ರಾಮದ ಸ.ನಂ.206C ವಿಸ್ತೀರ್ಣ 0–46 ಸೆಂಟ್ಸ್ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿಪತ್ರ ನಂ: **SRG-1-03516/2014-15 Dt.06-09-2014** ರಖರೀದಿ ಪತ್ರ ಪ್ರಕಾರ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಹುಚ್ಚಪ್ಪ ತಂದೆ: ಲೇಟ್ ಹರಿಜನ ಅದ್ದಿಗೇರಿ ಈರಪ್ಪ ಊಳೂರು ಗ್ರಾಮ ಇವರು ಊಳೂರುಗ್ರಾಮದ ಸ.ನಂ.206C ವಿಸ್ತೀರ್ಣ 0–46 ಸೆಂಟ್ಸ್ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿಪತ್ರ ನಂ: **SRG-1-03516/2014-15 Dt.06-09-2014** ರಖರೀದಿ ಪತ್ರ ಪ್ರಕಾರ ಗುಡ್ಡ ಹುಚ್ಚಪ್ಪ ತಂದೆ: ಲೇಟ್ ಈರಪ್ಪ ಇವರಿಂದ ಪದ್ಮಮ್ಮ ಉರುಫ್ ಪದ್ಮಾವತಿ ಗಂಡ: ಸುಧಾಕರ ರೆಡ್ಡಿ ಇವರು ಖರೀದಿ ಹೊಂದಿದ್ದು ಹಕ್ಕು ಬದಲಾವಣೆ ಸಂದರ್ಭದಲ್ಲಿ ತಕರಾರು ಅರ್ಜಿ ಸಲ್ಲಿಸಿದ್ದು ವಿಚಾರಣೆಗೆ ಹಾಜರಾಗಿದ್ದು ಯಾವುದೇ ಪೂರಕ ದಾಖಲೆಗಳನ್ನಾಗಲೀ ಲಿಖಿತ ಹೇಳಿಕೆಗಳನ್ನಾಗಲೀ ಸಲ್ಲಿಸಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ, ವಿಚಾರಣೆ ಮಾಡಲಾಗಿ, ಸದರಿ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿಪತ್ರ ನಂ: **SRG-1-03516/2014-15 Dt.06-09-2014** ಖರೀದಿ ಪತ್ರ ಪ್ರಕಾರ ಪದ್ಮಮ್ಮ ಉರುಫ್ ಪದ್ಮಾವತಿ ಗಂಡ: ಸುಧಾಕರ ರೆಡ್ಡಿ ಇವರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಊಳೂರುಗ್ರಾಮದ ಸ.ನಂ.206C ವಿಸ್ತೀರ್ಣ 0–46 ಸೆಂಟ್ಸ್ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿಪತ್ರ ನಂ: **SRG-1-03516/2014-15 Dt.06-09-2014** ರಖರೀದಿ ಪತ್ರ ಪ್ರಕಾರ ಪದ್ಮಮ್ಮ ಉರುಫ್ ಪದ್ಮಾವತಿ ಗಂಡ: ಸುಧಾಕರ ರೆಡ್ಡಿ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 17 – 8 –2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ.